# ಲಕ್ಷ್ಮೀ ಸಹಕಾರಿ ಬ್ಯಾಂಕ ನಿಯಮಿತ, ಗುಳೇದಗುಡ್ಡ.

**LAXMI SAHAKARI BANK NIYAMIT, GULEDGUDD**
**RBI LICENCE NO. UBD/KAN/1291P. Dt. 28.9.96**
**GULEDGUDD – 587 203 Dist : Bagalkot (State : Karnataka)**
☎: HO 9448111266, 08357-250310, HM BR 08357-250910, KMT BR 08351-287655, BGK BR 9448378100 BDM Br 08357-220240
Email : laxmibank1guledgudd@rediffmail.com


**Ref:** **Date:**

## ಬ್ಯಾಂಕಿನ ಪ್ರಗತಿಯ ಸಂಕ್ಷಿಪ್ತ ನೋಟ

ನೇಕಾರಿಕೆ ಮೂಲ ಕಸುಬಾಗಿರುವ ಕೆಳ ಹಾಗೂ ಮಧ್ಯಮಸ್ತರದ ಕೈಗಾರಿಕೆಗಳು ಹಾಗೂ ಇತರೆ ಸಣ್ಣ ವ್ಯಾಪಾರವನ್ನು ಹೊಂದಿರುವ ಗುಳೇದಗುಡ್ಡ ನಗರದಲ್ಲಿ ದಿ. 05/02/1913 ರಂದು ಶ್ರೀ ವೀರುಪಾಕ್ಷಪ್ಪನವರು ಭಾವಿ ಇವರ ನೇತೃತ್ವದಲ್ಲಿ ಚಿಕ್ಕ ಸೊಸೈಟಿಯಾಗಿ ಈ ಹಣಕಾಸು ಸಂಸ್ಥೆಯು ಪ್ರಾರಂಭಗೊಂಡಿತು. ನಂತರ ಶ್ರೀ ಎಸ್. ವಿ. ಬನಿಗೋಳ ಇವರ ಅಧ್ಯಕ್ಷತೆಯಲ್ಲಿ ದಿ. ಇಂಡಸ್ಟ್ರೀಯಲ್ ಕೋ–ಆಪ್ ಬ್ಯಾಂಕ ಎಂದು ನಾಮಕರಣಗೊಂಡಿತು. ಸನ್ 1974 ರಲ್ಲಿ ಶ್ರೀ ಎಸ್. ವಿ. ಕರಡಿಯವರ ಅಧ್ಯಕ್ಷತೆಯಲ್ಲಿ ದಿ. ಗುಳೇದಗುಡ್ಡ ಲಕ್ಷ್ಮೀ ಕೋ–ಆಪ್ ಬ್ಯಾಂಕ ಎಂದು ರೂಪುಗೊಂಡಿತು. ಈ ಸಂದರ್ಭದಲ್ಲಿ ಶ್ರೀ ಕರಡಿಯವರು ಬ್ಯಾಂಕಿಗೆ ಸಲ್ಲಿಸಿದ ಸೇವೆ ಹಾಗೂ ತ್ಯಾಗ ಅವಿಸ್ಮರಣೀಯ.

ನಂತರ ಶ್ರೀ ಎಮ್. ಎಸ್. ವಸ್ತ್ರದ, ಶ್ರೀ ಎಸ್. ಎಸ್. ಕಲ್ಯಾಣಿ ಹಾಗೂ ಶ್ರೀ ಎಮ್. ಬಿ. ಬನ್ನಿ ಇವರುಗಳ ಅಧ್ಯಕ್ಷತೆಯಲ್ಲಿ ಬ್ಯಾಂಕು ಪ್ರಗತಿಯತ್ತ ನಡೆಯಿತು. ಶ್ರೀ ಸಂಪತಕುಮಾರ ಜಿ. ರಾಠಿ ಇವರ ಅಧ್ಯಕ್ಷತೆಯಲ್ಲಿ ಬ್ಯಾಂಕು ಇನ್ನೂ ಹೆಚ್ಚಿನ ಗಮನಾರ್ಹ ಪ್ರಗತಿಯನ್ನು ಕಂಡಿತು. ಸನ್ 1994 ರಂದು ಶ್ರೀ ರಾಜಶೇಖರ ಶೀಲವಂತ ಇವರು ಅಧ್ಯಕ್ಷತೆ ವಹಿಸಿಕೊಂಡ ನಂತರ ಬ್ಯಾಂಕಿನ ನೂತನ ಭವ್ಯ ಹಾಗೂ ಸುಸಜ್ಜಿತ ಕಟ್ಟಡ ನಿರ್ಮಾಣಗೊಂಡು ದಿ. 10/05/1995 ರಂದು ಶ್ರೀ ನೀಲಕಂಠ ಮಹಾಸ್ವಾಮಿಗಳು, ಮುರುಘಾಮಠ ಇವರಿಂದ ಉದ್ಘಾಟನೆಗೊಂಡಿತು. ಈ ಹಂತದಲ್ಲಿ ಬ್ಯಾಂಕಿನ ಆರ್ಥಿಕ ಸ್ಥಿತಿ ಅತ್ಯುತ್ತಮವಾಗಿತ್ತು. ಇದನ್ನು ಪರಿಶೀಲಿಸಿದ ಭಾರತೀಯ ರಿಝರ್ವ ಬ್ಯಾಂಕ ದಿ. 28/09/1996 ರಂದು ಬ್ಯಾಂಕಿಂಗ್ ಲಾಯಿಸನ್ಸ ನೀಡಿದ್ದು, ಬ್ಯಾಂಕಿನ ಪ್ರಗತಿಯ ಐತಿಹಾಸಿಕ ಮೈಲುಗಲ್ಲು ಎಂದರೆ ತಪ್ಪಾಗಲಾರದು.

ನಂತರ ದಿ. 10/11/1997 ರಂದು ಗುಳೇದಗುಡ್ಡ ಹೊಸಪೇಟ ಮಾರ್ಕೇಟ ಶಾಖೆಯನ್ನು ದಿ. 27/08/1998 ರಂದು ಕಮತಗಿ ಶಾಖೆಯನ್ನು ಭಾರತೀಯ ರಿಝರ್ವ ಬ್ಯಾಂಕಿನ ಅನುಮತಿಯಿಂದ ಪ್ರಾರಂಭಿಸಲಾಯಿತು. ಈ ಹಂತದಲ್ಲಿ ಕೇವಲ ಗುಳೇದಗುಡ್ಡ ಹಾಗೂ ಸುತ್ತಲಿನ 10 ಕಿ.ಮೀ. ಗೆ ಸೀಮಿತವಾಗಿದ್ದ ಬ್ಯಾಂಕಿನ ಕಾರ್ಯವ್ಯಾಪ್ತಿಯನ್ನು ಬಾಗಲಕೋಟ, ಬಿಜಾಪೂರ, ಗದಗ, ಬೆಳಗಾಂವಿ ಹಾಗೂ ಕೊಪ್ಪಳ ಜಿಲ್ಲೆಗಳಿಗೂ ವಿಸ್ತರಿಸಲಾಯಿತು. ಮುಂದೆ ಶ್ರೀ ಎಸ್. ಜಿ. ರಾಠಿ ಇವರ ಅಧ್ಯಕ್ಷತೆಯಲ್ಲಿ ದಿ. 27/03/2010 ರಂದು ಪೂಜ್ಯ ಶ್ರೀ ಗುರುಸಿದ್ದರಾಜಯೋಗಿಂದ್ರ ಮಹಾಸ್ವಾಮಿಗಳು, ಮೂರುಸಾವಿರಮಠ, ಹುಬ್ಬಳ್ಳಿ ಇವರಿಂದ ಬಾಗಲಕೋಟ ಶಾಖೆಯನ್ನು ಹಾಗೂ ದಿ. 08/04/2011 ರಂದು ಬದಾಮಿ ಶಾಖೆಯನ್ನು ಪ್ರಾರಂಭಿಸಲಾಯಿತು. ಇಂದಿನ ತಾಂತ್ರಿಕ ದಿನಮಾನಕ್ಕೆ ತಕ್ಕಂತೆ SMS ಬ್ಯಾಂಕಿಂಗ್, NEFT/RTGS ಸೇವಾ ಸೌಲಭ್ಯ ಹಾಗೂ ಇನ್ನಿತರ ಬ್ಯಾಂಕಿಂಗ್ ಸೇವೆಗಳನ್ನು ಪೂರೈಸುತ್ತ ಈ ಭಾಗದ ಪ್ರತಿಷ್ಠಿತ ಬ್ಯಾಂಕ ಆಗಿ ರೂಪುಗೊಂಡಿದೆ.

ಸಧ್ಯ ಕಾರ್ಯನಿರ್ವಹಿಸುತ್ತಿರುವ 8 ಶಾಖೆಗಳಿಂದ ಬ್ಯಾಂಕು 100 ಕೋಟಿಗೂ ಹೆಚ್ಚು ದುಡಿಯುವ ಬಂಡವಾಳ ಹೊಂದಿದೆ. ಶತಮಾನೋತ್ಸವ ಆಚರಿಸಿಕೊಳ್ಳುತ್ತಿರುವ ಈ ಶುಭ ಸಂದರ್ಭದಲ್ಲಿ ಮುಧೋಳ, ಜಮಖಂಡಿ ಹಾಗೂ ಬಿಜಾಪೂರ ನಗರಗಳಲ್ಲಿ ಹೊಸ ಶಾಖೆಗಳನ್ನು ಪ್ರಾರಂಭಿಸಲಾಗಿದೆ. ಬ್ಯಾಂಕಿನ ಗ್ರಾಹಕರಿಗೆ ತ್ವರಿತವಾಗಿ ಸೇವೆಯನ್ನು ಒದಗಿಸುವ ಸಲುವಾಗಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ರಾಜಶೇಖರ ಶೀಲವಂತ ಹಾಗೂ ನಿರ್ದೇಶಕ ಮಂಡಳಿಯವರು ಜೊತೆಗೂಡಿ ಅವಿಷ್ಕಾರ ಕಂಪನಿಯವರಿಂದ ಅತ್ಯಾಧುನಿಕ ಕೋರ ಬ್ಯಾಂಕಿಂಗ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಮಹತ್ವದ ತೀರ್ಮಾನವನ್ನು ಕೈಗೊಂಡಿದ್ದು, ಪ್ರಗತಿಯ ಹಂತದಲ್ಲಿದೆ. ಹಾಗೂ ಇನ್ನಿತರ ವ್ಯವಸ್ಥೆಗಳಾದ ATM ಬ್ಯಾಂಕಿಂಗ್, SMS ಬ್ಯಾಂಕಿಂಗ್ ಪ್ರಾರಂಭಿಸಲು ಕೂಡ ತೀರ್ಮಾನಿಸಿ ಮಹತ್ವದ ಹೆಜ್ಜೆಯನ್ನು ಇಟ್ಟಿತು. ನೂರು ವಸಂತಗಳ ಯಶಸ್ಸಿನ ಮೆಟ್ಟಿಲೇರಿ ನಿಂತು ಮುಂದೆ ಸಾಗುತ್ತಿರುವ ನಮ್ಮ ಬ್ಯಾಂಕಿನ ಶತಮಾನೋತ್ಸವ ಆಚರಣೆಗೆ ನಾಡಿನ ಗಣ್ಯಮಾನ್ಯರ ಶುಭ ಹಾರೈಕೆಯನ್ನು ಬ್ಯಾಂಕಿನ ಆಡಳಿತ ಮಂಡಳಿ ಅಪೇಕ್ಷಿಸುತ್ತದೆ.

ಶಾಖೆಗಳು:

1) ಪ್ರಧಾನ ಕಚೇರಿ ಶಾಖೆ
2) ಹೊಸಪೇಟ ಮಾರ್ಕೆಟ, ಗುಳೇದಗುಡ್ಡ ಶಾಖೆ
3) ಕಮತಗಿ ಶಾಖೆ
4) ಬಾಗಲಕೋಟ ಶಾಖೆ
5) ಬದಾಮಿ ಶಾಖೆ
6) ಮುಧೋಳ ಶಾಖೆ
7) ಜಮಖಂಡಿ ಶಾಖೆ
8) ಬಿಜಾಪೂರ ಶಾಖೆ

31-03-2016 ಕ್ಕೆ ಇದ್ದಂತೆ ಸಾಂಪತ್ತಿಕ ಸ್ಥಿತಿ

(ರೂ. ಲಕ್ಷಗಳಲ್ಲಿ)

| | |
|---|---|
| ಶೇರು ಬಂಡವಾಳ | 549.07 |
| ಕಾಯ್ದಿಟ್ಟ ನಿಧಿಗಳು | 678.87 |
| ಠೇವುಗಳು | 12759.01 |
| ದುಡಿಯುವ ಬಂಡವಾಳ | 14122.12 |
| ಸಾಲಗಳು | 8515.64 |
| ಲಾಭ | 50.10 |

**Ref:** **Date:**

## Brief History of Laxmi Sahakari Bank Niyamit, Guledgudd.

It is a matter of great pleasure and privilege for me to present a historical background of our bank to its enlightened reader. This was resolved by local philanthropists to extend a yeoman service to all people of, in and around the town. This Institution is said to have established under a leadership of late Shri Veerupaxappa Bhavi and brought under legal frame of registration on 5th February 1913. During first six decades of its inception, it was with an aim of rescuing the local poor from the clutches of private money lenders, it extended a financial need to sustain their productive business. After 1961 in order to cater the needs of handloom weavers, it was renamed as Industrial Co operative Bank. Although an effective functioning of the Bank a needy recourse was not collected by the then leaders, so it was unanimously resolved to change the banner of institution.

Subsequently, in the year 1974 this institution was renamed as Guledgudd Laxmi Urban Co operative Bank Ltd. At this juncture an efforts of the then leader late Shri V. S. Karadi who strengthened the unit with small fund of Rs. 1.16 laks are remembered with greater appreciation. In order to mobilize resource, he initially approached to DCC Bank Bijapur keeping in view about the then conditions of our Bank, a security was demanded by DCC Bank Bijapur. In that situation Shri V. S. Karadi pledged his own house as taken of security and got sanctioned a cash credit. At this time by the effective service of bank managers like Shri S. V. Tattimath, Shri B. Y. Kuri, it could mobilize its resource and accelerated its capital fund to as high as Rs. 17.69 laks including share capital of Rs. 1.47 laks by end of the march 1983.

Further, during 1983-84 a Managing Board was changed, then an eminent businessman of the town late Shri M. S. Vastrad was made a chairman. In his tenure also Bank achieved remarkable progress. With guidance of retired DCC Bank manager Shri S.

K. Hiremath he started working to the path of prosperity. As a result the capital of the bank raised to Rs. 25.17 laks in a financial year ending of 1985.

Further more the bank started to grow by many young and energetic leadership from 1985 to 1988 the then chairman late Shri S. S. Kalyani played a good role and accelerated its fund to 38.58 lakhs. Later the Board of management chaired by Shri M. B. Banni also put all his herculean efforts towards growth of the bank. As a result of it our bank could raise its resource to remarkable extant of Rs. 174.08 laks. Handloom, power loom weavers, small merchants and agriculturist were made to seek benefit from the bank.

It is remarkable to note that the outstanding and real achievement in the way of prosperity of bank is said to have witnessed, under the young, dynamic and farsighted chairmanship of Shri Rajashekar V. Sheelavant. During this time along with his MLA designations, he could extend all his concern towards top stage of Bank. It is so appreciated by mass public that first qualified with all ameliorative skills a person occupied the position of chairman. All localities dreamt for the progressed of the bank. The dream of public became true as the bank recognized by esteemed Reserve Bank of India by granting license No. UBD/KAN/1291/P Dated 28/09/1996. This was impetuously led to take the bank as a premier co operative bank in northern Karnataka. It is reflected in considerable acceleration of Banks working capital to as high as Rs. 780.50 lakhs to the end of financial year of 1998.

It was because of incessant and series of social work of Shri Rajashekar V. Sheelavant, he handed over the chairmanship to Shri Sampathkumar G. Rathi who is also said to have identified a pro-progressive and prominent business person. During his regime also our Bank grown its funds remarkably to Rs. 1365.23 laks and earned a good name and fame.

It was again since the year 1999 the responsibilities of strengthening the bank has been shouldered to Shri Rajashekhar V. Sheelavant for last 15 years the present Chairman upholding a cordial relation with all people of the town and surrounding villages, and with his due care and concern about its members, customers took the bank to his pro active success. His unstinting efforts facilitated the bank to bring under core banking, and extended facilities of RTGS and NEFT to its customers. It is so admired that by his effective and efficient chairmanship he could accelerated its working funds as ever high as of Rs. 10210.47 lakhs by the end of previous financial year.

The dedicative and devotional attitudes of Shri Rajashekhar V. Sheelavant reflected in terms of establishment of more branches. As token new branches at Hospeth area of the town, Kamatagi are said to have been working for the last ten years. And recently new branches at Badami, Bagalkot, Mudhol, Jamakhandi and Bijapur have also been established. All 8 branches are being glittered with satisfactory symptoms of self reliant and profit.

Our Bank comparatively speaking has earned good 'Grade - I' Bank reward from RBI. It is applauding to say that good number of small business persons, weavers, agriculturist, handicrafts and all common people are accessing the benefit of the bank. The Functioning system of the bank personnel is also highly appreciable in an all-round development of the bank.

It is noteworthy fact that bank has been rendering its services in a democratic and socialistic principles.

It is accepted fact that for the achiever what all he did is inspiration to do more in future. So all are committed and consistent towards its still more prosperity.

## ಬ್ಯಾಂಕಿನ ಸಂಕ್ಷಿಪ್ತ ಇತಿಹಾಸ 1913 ರಿಂದ 1964

ಐತಿಹಾಸಿಕ ಬಾದಾಮಿ ತಾಲೂಕಿನ ಗುಳೇದಗುಡ್ಡ ಪಟ್ಟಣವು ನೇಕಾರಿಕೆಗೆ ಪ್ರಸಿದ್ದಿವಾಗಿದೆ. ಪಟ್ಟಣದ ಶೇಕಡಾ 80 ರಷ್ಟು ಜನರು ನೇಕಾರಿಕೆಯನ್ನು ಅವಲಂಬಿತರಾಗಿದ್ದರು. ನೇಕಾರರ ಆರ್ಥಿಕ ಬೆಳವಣಿಗೆ ಆಗಬೇಕಾದರೆ ಅವರಿಗೆ ಕಚ್ಚಾ ಮಾಲಿನ ಅವಶ್ಯಕತೆ ಇದ್ದು ಇದನ್ನು ಮನಗೊಂಡು ಊರಿನ ಗಣ್ಯರು ಶ್ರೀ ವಿರುಪಾಕ್ಷಪ್ಪನವರ ನೇತೃತ್ವದಲ್ಲಿ 05/02/2013 ರಲ್ಲಿ ಸಣ್ಣ ಪ್ರಮಾಣದ ನೇಕಾರರ ಸಹಕಾರಿ ಸಂಘವನ್ನು ಪ್ರಾರಂಭಮಾಡಿದರು. ಈ ಸಂಘವು ಗುಳೇದಗುಡ್ಡ ಪಟ್ಟಣಕ್ಕೆ ಸೀಮೀತವಾಗಿ ವ್ಯವಹಾರ ವೃದ್ಧಿಯಾಗಿ ಬೆಳೆಯುತ್ತಾ ಸಾಗಿತು. ಸದರ ಸಂಸ್ಥೆಯು 1929 ರಲ್ಲಿ ಇಂಡಸ್ಟ್ರಿಯಲ್ ಕೋ ಆರ್ಫ ಬ್ಯಾಂಕ ಆಗಿ ಪರಿವರ್ತನೆ ಗೊಂಡಿತು. 1929 ರಿಂದ 1935 ರವರೆಗೆ ಸದಸ್ಯರಿಗೆ ಎಲ್ಲ ರೀತಿಯ ಸಾಲ ಸೌಲಭ್ಯಗಳನ್ನು ಒದಗಿಸುತ ಬಡಜನರಿಗೆ ದಾರಿದೀಪವಾಯಿತು.

ಸ್ವಾತಂತ್ರ್ಯಾ ನಂತರ 1956 ರ ಸಹಕಾರ ಸಂಘಗಳ ಹೊಸ ಕಾಯ್ದೆ ಅನ್ವಯ ಗುಳೇದಗುಡ್ಡದ ಸುತ್ತಮುತ್ತಲಿನ ಗ್ರಾಮಗಳಿಗೆ ಅನುಕೂಲತೆಗಾಗಿ ಕಾರ್ಯಕ್ಷೇತ್ರವನ್ನು ಹೆಚ್ಚಿಸಿಕೊಂಡಿತು. 1960 ರಲ್ಲಿ ತನ್ನದೇ ಆದ ಉಪನಿಬಂಧನೆಗಳನ್ನು ಹೊಂದಿ ಈ ಸಂಸ್ಥೆಯು ಗುಳೇದಗುಡ್ಡ ಅರ್ಬನ ಕೋ ಆಫರೇಟಿವ್ ಬ್ಯಾಂಕ ಆಗಿ ಬ್ಯಾಂಕಿನ ವ್ಯವಹಾರವನ್ನು ವಿಸ್ತರಿಸಿತು. 1964– 65 ರಲ್ಲಿ ಶ್ರೀ ದಿ ಷಡಕ್ಷರಪ್ಪನವರು ವ್ಹಿ ಬಳಿಗೋಳ ಇವರು ಬ್ಯಾಂಕಿನ ಅಧ್ಯಕ್ಷರಾಗಿ ನೇತೃತ್ವವಹಿಸಿದ್ದರು.

### ದಿನಾಂಕ : 30–06–1964 ರ ಆರ್ಥಿಕ ಸ್ಥಿತಿ

| | | |
|---|---|---|
| 1 | Sh Capital | 20,195-00 |
| 2 | Res & Funds | 20352.49 |
| 3 | Deposits | 7040-00 |
| 4 | Loans | 24611-96 |
| 5 | Net Profit | 437-00 |

## 1964 ರಿಂದ 1989

1970 ರಲ್ಲಿ ಬ್ಯಾಂಕಿನ ವ್ಯವಹಾರವು ಸ್ವಲ್ಪ ಮಟ್ಟಿಗೆ ಹಾನಿಗೊಳಪಟ್ಟಿತು. ಸದರ ಸಂಸ್ಥೆಯನ್ನು ಬೆಳಸಲೇಬೆಕೆನ್ನುವ ದೃಢ ಸಂಕಲ್ಪ ಮಾಡಿ ಶ್ರೀ ಸಂಗಪ್ಪನವರು ವ್ಹಿ ಕರಡಿ ಯವರು ಸನ್ 1974 ರಲ್ಲಿ ಬ್ಯಾಂಕಿನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು. ತಮ್ಮ ಅವಧಿಯಲ್ಲಿ ಶ್ರೀ ಕರಡಿಯವರು ಬ್ಯಾಂಕಿನ ಯಾವುದೇ ಖರ್ಚು ವೆಚ್ಚಗಳನ್ನು ತಾವೇ ನಿಭಾಯಿಸಿ ಬ್ಯಾಂಕಿನ ಪ್ರಗತಿಗೆ ಕಾರಣರಾದರು. ಈ ಸಂಸ್ಥೆಯು ಸಂಗಪ್ಪನವರು ಕರಡಿ ಇವರಿಂದ ಮರು ಜೀವ ಪಡೆದುಕೊಂಡಿದೆ ಎಂದರೆ ತಪ್ಪಾಗದು.

ಮೊದಲು ರೂ10/– ಶೇರು ಇದ್ದದ್ದನ್ನು ರೂ.100/– ಗೆ ಪರಿವರ್ತನೆ ಮಾಡಿ ಠವು ಹಾಗೂ ಶೇರು ಬಂಡಾವಾಳವನ್ನು ವೃದ್ಧಿಪಡಿಸಿದರು. 1983 ರವರಗೆ 9 ವರ್ಷಗಳ ವರೆಗೆ ಇವರ ಅಧ್ಯಕ್ಷತೆಯು ಒಳ್ಳೆಯ ರೀತಿಯಲ್ಲಿ ಬ್ಯಾಂಕಿನ ಬೆಳವಣಿಗೆಗೆ ಪಾತ್ರರಾದರು.

ಶ್ರೀ ಸಂಗಪ್ಪನವರು ಕರಡಿ ಇವರ ಮರಣದ ನಂತರ ಬ್ಯಾಂಕಿನ ಅಧ್ಯಕ್ಷತೆಯನ್ನು ಶ್ರೀ ಮಹಾಂತಯ್ಯನವರು ವಸ್ತ್ರದ ಇವರು ವಹಿಸಿದರು. ಆಗ ಬ್ಯಾಂಕಿನ ಶೇರು ಬಂಡವಾಳವು ರೂ 1.00 ಲಕ್ಷಕ್ಕಿಂತ ಕಡಿಮೆ ಇದ್ದು ಶೇರು ಹಣ ಕಡಿಮೆ ಇದ್ದು ಬ್ಯಾಂಕನ್ನು ಸೊಸಾಯಟಿ ಅಂತಾ ಪರವರ್ತನೆ ಮಾಡುವದಾಗಿ ತಿಳಿಸಿದಾಗ ಉಳಿದ ಎಲ್ಲ ನಿರ್ದೇಶಕರ ಜೊತೆಗೂಡಿ ಶೇರು ಹಣವನ್ನು ಹೆಚ್ಚಿಗೆ ಮಾಡಿ ಸ್ವಂತ ಠೇವುಗಳನ್ನು ತೊಡಗಿಸಿ ಬ್ಯಾಂಕಿನ ಏಳ್ಗೆಗೆ ಪತ್ರರಾದರು.

ದಿನಾಂಕ 16–16–1986 ರಲ್ಲಿ ಶ್ರೀ ಮಾಹಾಂತಯ್ಯನವರು ವಸ್ತ್ರದ ಇವರು ಅಕಾಲಿಕ ನಿಧನರಾದ ನಂತರ ಸದರ ಸಂಸ್ಥೆಯ ಅಧ್ಯಕ್ಷತೆಯನ್ನು ಶ್ರೀ ಸಂಗಣ್ಣ ಕೆ ಕಲ್ಯಾಣಿ ಇವರು ವಹಿಸಿಕೊಂಡರು. ಬ್ಯಾಂಕು ಹೆಚ್ಚಿನ ಪ್ರಗತಿ ಸಾಧಿಸಿ ಬ್ಯಾಂಕಿಗೆ ಸ್ವಂತ ಕಟ್ಟಡದ ಅವಶ್ಯವೆಂದು ಮನಗೊಂಡು ಊರಿನ ಮಧ್ಯಭಾಗದ ಪುರಸಭೆಯ ಹತ್ತಿರವಿರುವ ಶ್ರೀ ಎಂ ಆರ್ ಗಾಣೀಗೇರ ಇವರ ಜಾಗೆಯನ್ನು ಖರೀದಿಸಲಾಯಿತು. ಇದೇ ಅವಧಿಯಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ 1 ) ಶ್ರೀ ಎಚ್ ವ್ಹಿ ಉದ್ನೂರ. 2) ಶ್ರೀ ಆರ್ ಕೆ ಹೆಗಡೆ 3 ) ಶ್ರೀ ಟಿ ಎಂ ಕಲಾಲ 4) ಶ್ರೀ ಸಿ ವ್ಹಿ ತಾಳಿಕೋಟಿ. ಇವರುಗಳ ಸೇವೆಯೂ ಮಹತ್ವದ್ದಾಗಿದೆ.

ಈ ಅವಧಿಯಲ್ಲಿ ವ್ಯವಸ್ಥಾಪಕರಾಗಿದ್ದ ಶ್ರೀ ಬಿ ವಾಯ್ ಕುರಿ , ಶ್ರೀ ಎಸ್ ಕೆ ಹಿರೇಮಠ. ಹಾಗೂ ಪದನಿಮಿತ್ಯ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿದ ಎನ್ ಎಸ್ ರಾಜನಾಳ ಹಾಗೂ ಇನ್ನಿತರ ಸಿಬ್ಬಂದಿ ಸೇವೆಯೂ ಗಮನಾರ್ಹ.

31–03–1989 ರಂದು ಬ್ಯಾಂಕಿನ ಆರ್ಥೀಕ ಸ್ಥಿತಿ. (ರೂ. ಲಕ್ಷಗಳಲ್ಲಿ)

| | |
|---|---|
| ಶೇರು ಬಂಡವಾಳ | – 3.56 |
| ಕಾಯ್ದಿಟ್ಟ & ಇತರ ನಿಧಿಗಳೂ | – 9.08 * |
| ಠೇವುಗಳು | – 53.53 |
| ಸಾಲಗಳು | – 36.37 |
| ನಿವ್ವಳ ಲಾಭ | – 0.62 |

## 1989 ರಿಂದ 2016

ದಿನಾಂಕ 06-03-1990 ರಂದು ಶ್ರೀ ಸಂಗಮೇಶ ಕಲ್ಯಾಣಿ ಇವರ ನಿಧನದ ನಂತರ ಶ್ರೀ ಮುರಿಗೆಪ್ಪ ಬಸಪ್ಪ ಬನ್ನಿ ಇವರು ಬ್ಯಾಂಕಿನ ನೂತನ ಚೇರಮನ್ನರಾದರು. ಈ ಅವಧಿಯಲ್ಲಿ ಬ್ಯಾಂಕಿನ ಸದಸ್ಯತ್ವ ಖಾತೆಗಳು ಠೇವಣಿಗಳಲ್ಲಿ ವೇಗದ ಪ್ರಗತಿ ಕಂಡು ಬಂತು. ಇದೇ ಅವಧಿಯಲ್ಲಿ ಬ್ಯಾಂಕಿನ ನೂತನ ಕಟ್ಟಡದ ಭೂಮಿ ಪೂಜೆ ಶ್ರೀ ಮ.ನಿ. ಪ್ರ. ನೀಲಕಂಠ ಮಹಾಸ್ವಾಮಿಗಳ ಅಮೃತ ಹಸ್ತದಿಂದ ನೆರವೇರಿತು. ಇದೇ ಅವಧಿಯಲ್ಲಿ ಬ್ಯಾಂಕು ಠೇವಣಿ ಸಂಗ್ರಹದಲ್ಲಿ ಅತ್ಯುತ್ತಮ ಸಾಧನೆ ಮಾಡಿತು. ಸನ್ 1993 ಕ್ಕೆ ಬ್ಯಾಂಕಿನ ಒಟ್ಟು ಠೇವಣಿ ರೂ. 1.50 ಕೋಟಿ ದಾಟಿತು.

ಸನ್ 1994 ರಲ್ಲಿ ಶ್ರೀ ರಾಜಶೇಖರ ವ್ಹಿ ಶೀಲವಂತ ಇವರ ನೇತೃತ್ವದ ನೂತನ ನಿಧೇಶಕ ಮಂಡಳಿಯು ಅಸ್ತಿತ್ವಕ್ಕೆ ಬಂದಿತು. ಪದವೀದರರೂ ದೂರ ದೃಷ್ಟಿಯುಳ್ಳ ಉತ್ಸಾಹಿ ಯುವಕರೂ ಆದ ಶ್ರೀ ರಾಜಶೇಖರ ವ್ಹಿ ಶೀಲವಂತ ಇವರ ಅಧ್ಯಕ್ಷತೆಯ ಆರಾಂಭದಲ್ಲಿಯೇ ಬ್ಯಾಂಕಿನ ವಹಿವಾಟುಗಳು ದೊಡ್ಡ ನೆಗೆತವನ್ನು ಹೊಂದಿದವು ಎಂದು ಹೇಳಿದರೆ ತಪ್ಪಾಗಲಾರದು. ಇದೇ ಅವಧಿಯಲ್ಲಿ ಬ್ಯಾಂಕಿನ ಅತ್ಯಾಧುನಿಕ ಸೌಲಭ್ಯವುಳ್ಳ ಸುಸಜ್ಜಿತ ಕಟ್ಟಡವು ನಿರ್ಮಾಣವಾಯಿತು. ಇದರ ಉದ್ಘಾಟನಾ ಸಮಾರಂಭಕ್ಕೆ ಆಗಿನ ಸಹಕಾರಿ ಸಚಿವರಾದ ಶ್ರೀ ಎಸ್ ಎಸ್ ಪಾಟೀಲ ಹಾಗೂ ಆಗಿನ ಅರಣ್ಯ ಸಚಿವರಾದ ಶ್ರೀ ಎಚ್ ವಾಯ್ ಮೇಟಿ ಆಗಿಮಿಸಿದ್ದರು. ಈ ಉದ್ಘಾಟನಾ ಸಮಾರಾಂಭದ ಮುಖ್ಯ ಆತಿಥ್ಯವನ್ನು ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ ವಹಿಸಿಕೊಂಡಿದ್ದರು. ಬ್ಯಾಂಕಿನ ಕಛೇರಿಯು ನೂತನ ಕಟ್ಟಡಕ್ಕೆ ವರ್ಗಾವಣೆಗೊಂಡ ನಂತರ ಬ್ಯಾಂಕಿನ ವಹಿವಾಟು ಗಣಣೀಯ ಪ್ರಮಾಣದಲ್ಲಿ ಹೆಚ್ಚಿತು ಇದೇ ಅವಧಿಯಲ್ಲಿ ಬ್ಯಾಂಕಿಗೆ ಭೇಟಿ ನೀಡಿದ ಭಾರತೀಯ ರಿಜರ್ವ ಬ್ಯಾಂಕಿನ ಅಧಿಕಾರಿಗಳ ತಂಡ ಬ್ಯಾಂಕಿನ ವ್ಯವಹಾರವನ್ನು ಮೆಚ್ಚಿಕೊಂಡು ದಿನಾಂಕ 28/09/1996 ರಂದು ಆರ್ ಬಿ ಐ ಲೈಸನ್ಸ ನೀಡಿತು. ಬ್ಯಾಂಕಿನ ಇತಿಹಾಸದಲ್ಲಿ ಇದೊಂದು ಐತಿಹಾಸಿಕ ಮೈಲಿಗಲ್ಲು ಎಂದರೆ ತಪ್ಪಾಗಲಾರದು. ಈ ಅವಧಿಯಲ್ಲಿ ಉಪಾಧ್ಯಕ್ಷರಾಗಿದ್ದ ಶ್ರೀ ಎಂ ಬಿ ಬೆಣ್ಣಿ ಇವರ ಸೇವೆಯೂ ಸ್ತುತ್ಯಾರ್ಹ

ಈ ಅವಧಿಯಲ್ಲಿ ಶಾಸಕರಾಗಿಯೂ ಆಯ್ಕೆಯಾದ ಶ್ರೀ ರಾಜಶೇಖರ ವ್ಹಿ ಶೀಲವಂತ ಇವರು ಬ್ಯಾಂಕಿನ ವ್ಯವಹಾರವನ್ನು ಗುಳೇದಗುಡ್ಡ ಭಾಗದ ಪ್ರತಿ ಹಳ್ಳಿಗೂ ವಿಸ್ತರಿಸಿದರು. ಹಾಗೂ ಬ್ಯಾಂಕು ಗುಳೇದಗುಡ್ಡ ನಗರದ ಹೊಸಪೇಟ ಮಾರ್ಕೆಟ ಮತ್ತು ಕಮತಗಿಯಲ್ಲಿ ತನ್ನ ಶಾಖೆಯನ್ನು ಪ್ರಾರಂಭಿಸಿತು. ಇದರ ಪರಿಣಾಮವಾಗಿ ಸನ್ 1998 ರಲ್ಲಿ ಬ್ಯಾಂಕಿನ ದುಡಿಯುವ ಬಂಡವಾಳ ರೂ.780.50 ಲಕ್ಷ ದಾಟಿ ಬ್ಯಾಂಕು ಬಾಗಲಕೋಟ ಜಿಲ್ಲೆಯಲ್ಲಿಯೇ ಪ್ರತಿಷ್ಠಿತ ಬ್ಯಾಂಕಾಗಿ ಹೊರಹೊಮ್ಮಿತು.

1998 ರಲ್ಲಿ ಶ್ರೀ ರಾಜಶೇಖರ ವ್ಹಿ ಶೀಲವಂತ ಇವರ ನಿರ್ಧೇಶನದಂತೆ ಉತ್ಸಾಹಿ ಯುವಕ ಹಾಗೂ ಅನುಭವಿ ನಿರ್ಧೇಶಕರಾದ ಶ್ರೀ ಸಂಪತ್ ಕುಮಾರ ರಾಠಿ ಇವರು ಬ್ಯಾಂಕಿನ ಅಧ್ಯಕ್ಷರಾದರು ಹಾಗೂ ಶ್ರೀ ಎಸ್ ಎಂ ರೊಡಗೈ ಇವರು ಉಪಾಧ್ಯಕ್ಷರಾದರು. ಇವರ ಅವಧಿಯಲ್ಲಿ ಬ್ಯಾಂಕು ಹೆಚ್ಚಿನ ಪ್ರಗತಿಯನ್ನು ಸಾಧಿಸಿತು. ಸನ್ 2000 ರ ಹೊತಿಗೆ ಬ್ಯಾಂಕಿನ ದುಡಿಯುವ ಬಂಡವಾಳ ರೂ1365.23 ಲಕ್ಷ ತಲುಪಿತು.

ಸನ್ 2000 ರಲ್ಲಿ ಶ್ರೀ ರಾಜಶೇಖರ ವ್ಹಿ ಶೀಲವಂತ ಮತೊಮ್ಮೆ ಬ್ಯಾಂಕಿನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು. ಈ ಅವಧಿಯಲ್ಲಿ ಶ್ರೀ ವ್ಹಿ ಎಂ ಚಿಂದಿ ಉಪಾಧ್ಯಕ್ಷರಾಗಿದ್ದರು. ಈ ಅವಧಿಯಲ್ಲಿ ಜಿಲ್ಲೆಯಲ್ಲಿಯೇ ಪ್ರಪ್ರಥಮ ಬಾರಿಗೆ ಬ್ಯಾಂಕಿನ ಗಣಕೀಕರಣ ವ್ಯವಸ್ಥೆಯನ್ನು ಪ್ರಾರಂಭಿಸಿದರು. ಹಾಗೂ ಅಲ್ಪ ಅವಧಿಯಲ್ಲಯೇ ಬ್ಯಾಂಕು ಸಂಪೂರ್ಣ ಗಣಕೀಕೃತ ಬ್ಯಾಂಕ ಆಗುವಂತೆ ನೋಡಿಕೊಂಡರು. ಕೇವಲ ಬಾಗಲಕೋಟ ಜಿಲ್ಲೆಗೆ ಮಾತ್ರ ಸೀಮಿತವಾಗಿದ್ದ ಬ್ಯಾಂಕಿನ ಕಾರ್ಯವಾಪ್ತಿಯನ್ನು ***(Work of operation)*** ಸುತ್ತಮುತ್ತಲಿನ ಜಿಲ್ಲೆಗಳಾದ ವಿಜಯಪೂರ, ಬೆಳಗಾಂ, ಗದಗ, ಕೊಪ್ಪಳ ಜಿಲ್ಲೆಗಳಿಗೆ ವಿಸ್ತರಿಸಲಾಯಿತು. ಕಳೆದ 15 ವರ್ಷದ ಅವಧಿಯಲ್ಲಿ ಶ್ರೀ ರಾಜಶೇಖರ ವ್ಹಿ ಶೀಲವಂತ ಇವರ ನೇತೃತ್ವದಲ್ಲಿ ಬ್ಯಾಂಕು ಅನೇಕ ಮಜಲುಗಳನ್ನು ದಾಟಿದೆ. ದಿನಾಂಕ 23/03/2011 ರಂದು ಹುಬ್ಬಳ್ಳಿಯ ಮೂರುಸಾವಿರ ಮಠದ ಶ್ರೀ ಗುರುಸಿದ್ದರಾಜಯೋಗಿಂದ್ರ ಮಹಾಸ್ವಾಮಿಗಳ ಅಮೃತ

ಹಸ್ತದಿಂದ ಬಾಗಲಕೋಟ ಶಾಖೆಯನ್ನು ಹಾಗೂ ದಿನಾಂಕ 08/04/2011 ರಂದು ಬಾದಾಮಿಯ ಶಾಖೆಯನ್ನು ಪ್ರಾರಂಭಿಸಲಾಯಿತು. ಈ ಅವಧಿಗಳಲ್ಲಿ ಶ್ರೀ ವಾಯ್ ಎಂ ಕಳ್ಳಿಗುಡ್ಡ, ಶ್ರೀ ಎಂ ಎಸ್ ರಾಜನಾಳ , ಶ್ರೀ ಕೆ ಎಸ್ ಮಾಲಪಾಣಿ ಇವರು ಉಪಾಧ್ಯಕ್ಷರು ಗಳಾಗಿ ಬ್ಯಾಂಕಿಗೆ ಅನುಪಮ ಸೇವೆಯನ್ನು ಸಲ್ಲಿಸಿದ್ದಾರೆ.

ಇಂದಿನ ದಿನಮಾನದಲ್ಲಿ ಪಟ್ಟಣ ಸಹಕಾರಿ ಬ್ಯಾಂಕುಗಳು ಖಾಸಗಿ ಕ್ಷೇತ್ರದ ಬ್ಯಾಂಕುಗಳಂದಿಗೆ ತೀವ್ರ ಸ್ಪರ್ಧೆಯನ್ನು ಎದುರಿಸಬೇಕಾಗಿದೆ. ಇದನ್ನು ಧನಾತ್ಮಕವಾಗಿ ಸ್ವೀಕರಿಸಿದ ಬ್ಯಾಂಕು ತನ್ನ ಸದಸ್ಯರು ಹಾಗೂ ಗ್ರಾಹಕರಿಗೆ ಆಧುನಿಕ ಸೌಲಭ್ಯ ಕೊಡುವ ದೃಷ್ಟಿಯಿಂದ ಕೋರ ಬ್ಯಾಂಕಿಂಗ್ ಸೌಲಭ್ಯ, *NEFT/RTGS* ಸೌಲಭ್ಯ ಒಳಗೊಂಡಂತೆ ಅತ್ಯಾಧುನಿಕ ಸೇವೆಯನ್ನು ಒದಗಿಸುತ್ತಿದೆ. ದಿನಾಂಕ 22/11/2013 ರಂದು ಮುಧೋಳ ನಗರದಲ್ಲಿ, 23/12/2013 ರಂದು ಜಮಖಂಡಿ ನಗರದಲ್ಲಿ, ಹಾಗೂ 31/01/2014 ರಂದು ವಿಜಯಪುರ ನಗರದಲ್ಲಿ ನೂತನ ಶಾಖೆಗಳನ್ನು ಪ್ರಾರಂಭಿಸಲಾಯಿತು. ಇದೆಲ್ಲದರ ಪರಿಣಾಮವಾಗಿ ಬ್ಯಾಂಕಿನ ಆರ್ಥಿಕ ಸ್ಥಿತಿ ಸದೃಢಗೊಂಡು ಸನ್ 2016 ಕ್ಕೆ ಬ್ಯಾಂಕಿನ ದುಡಿಯುವ ಬಂಡವಾಳ ರೂ141.22 ಕೋಟಿ ದಾಟಿದೆ ಎಂದು ತಿಳಿಸಲು ಸಂತೋಷವೆನಿಸುತ್ತದೆ.

ಹಲವಾರು ಅಡೆತಡೆಗಳ ಮಧ್ಯದಲ್ಲೂ ಎದೆಗುಂದದೆ ತಿವಿಕ್ರಮನಂತೆ ಹೆಮ್ಮರವಾಗಿ ಬೆಳೆದು ನಿಂತ ಲಕ್ಷ್ಮೀ ಸಹಕಾರಿ ಬ್ಯಾಂಕ ಇಂದು ಶತಮಾನೋತ್ಸವ ಆಚರಿಸುವ ಸಂಭ್ರಮದಲ್ಲಿದೆ. ಈ ಹಂತದಲ್ಲಿ ಬ್ಯಾಂಕಿನ ಶ್ರೇಯೋಭಿವೃದ್ಧಿಗೆ ಕಾರಣರಾದ ಹಿಂದಿನ ಎಲ್ಲ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕ ಮಂಡಳಿಗೆ ಹಾಗೂ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿದ ಎಲ್ಲ ಸಿಬ್ಬಂದಿಯವರಿಗೆ ಹುತ್ಪೂರ್ವಕ ವಂದನೆಗಳನ್ನು ತಿಳಿಸುತ್ತೇನೆ.

31-03-2016 ಕ್ಕೆ ಇದ್ದಂತೆ ಸಾಂಪತ್ತಿಕ ಸ್ಥಿತಿ

(ರೂ. ಲಕ್ಷಗಳಲ್ಲಿ)

| | |
|---|---|
| ಶೇರು ಬಂಡವಾಳ | 549.07 |
| ಕಾಯ್ದಿಟ್ಟ ನಿಧಿಗಳು | 678.87 |
| ಠೇವುಗಳು | 12759.01 |
| ದುಡಿಯುವ ಬಂಡವಾಳ | 14122.12 |
| ಸಾಲಗಳು | 8515.64 |
| ಲಾಭ | 50.10 |

## <u>ಬ್ಯಾಂಕಿನ ಸಾಧನೆಗಳ ಪಕ್ಷಿನೋಟ</u>

- ಬಾಗಲಕೋಟ ಜಿಲ್ಲೆಯಲ್ಲಿಯೇ ಪ್ರಪ್ರಥಮವಾಗಿ ಗಣಕೀಕೃತಗೊಂಡ ಬ್ಯಾಂಕ – 1996 ರಲ್ಲಿ
- ರಾಷ್ಟ್ರೀಯ ಅರ್ಬನ ಬ್ಯಾಂಕ ಗಳ ಮಹಾಮಂಡಳ ನವದೆಹಲಿ ಇದಕ್ಕೆ ನಮ್ಮ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ರಾಜಶೇಖರ ಷ್ಠಿ ಶೀಲವಂತ ಇವರು ನಿರ್ದೇಶಕರಾಗಿ ಆಯ್ಕೆಯಾಗಿದ್ದು. – 2011
- ಅಪಘಾತದಲ್ಲಿ ಮಡಿದ ಸದಸ್ಯರ ಕುಟುಂಬಗಳಿಗೆ ರೂ.1 ಲಕ್ಷ ವಿಮಾ ಸೌಲಭ್ಯ ಪ್ರಾರಂಭಿಸಿದ್ದು – 2004
- ಕೈಮಗ್ಗ ಮತ್ತು ಜವಳಿ ಇಲಾಖೆಯ ಸಹಯೋಗದೊಂದಿಗೆ ನೇಕಾರರಿಗಾಗಿ ತಾಂತ್ರಿಕ ಉನ್ನತೀಕರಣ ಕಾರ್ಯಾಗಾರ – ದಿ. 06/10/2005
- ಬ್ಯಾಂಕಿನ ವ್ಯಾಪಾರಸ್ಥರ ಹಾಗೂ ನಗರದ ಭಾರತೀಯ ಜೀವ ವಿಮಾ ನಿಗಮದ ಪ್ರತಿನಿಧಿಗಳ ಸಭೆ– ದಿ. 20/01/2006
- ನಮ್ಮ ಬ್ಯಾಂಕಿನ ಹೊಸಪೇಟ ಮಾರ್ಕೆಟ ಶಾಖೆಯ ಕಟ್ಟಡ ಖರೀದಿ ಮಾಡಿದ್ದು – 2006 – 07
- ಸೇವಾ ಭಾರತಿ ಸಂಚಾರಿ ಚಿಕಿತ್ಸಾಲಯದ ಅಂಬುಲೆನ್ಸ ವಾಹನ ಖರೀದಾಗಿ ಸೇವಾಭಾರತಿ ಅಧ್ಯಕ್ಷರಾದ ಶ್ರೀ ಜಿ ಡಿ ರಾಠಿ ಯವರಿಗೆ ಬ್ಯಾಂಕಿನಿಂದ ಮಾರುತಿ ವ್ಯಾನ ವಿತರಿಸಿದ್ದು – ಜುಲೈ 2007
- ಸಿಬ್ಬಂದಿಗಳಿಗೆ ಕೌಶಲ್ಯ ತರಬೇತಿ ಏರ್ಪಡಿಸಿದ್ದು (ಬಾಲಕಿಯರ ಸರಕಾರಿ ಹೈಸ್ಕೂಲದಲ್ಲಿ) – 23/12/2007

- ಸದಸ್ಯರಿಗೆ ಮರಣೋತ್ತರ ನಿಧಿ ಕೊಡಲು ಪ್ರಾರಂಭಿಸಿದ ವರ್ಷ – 01/10/2008
  (ರೂ.1000/– ದಿಂದ 15/09/2013 ರಂದು ರೂ.2000/– ಕ್ಕೆ ಹೆಚ್ಚಿಸಲಾಯಿತು)
- ಪ್ರತಿಭಾ ಪುರಸ್ಕಾರ ಪ್ರಾರಂಭಿಸಿದ ವರ್ಷ – 2007–08
- ಉತ್ತಮ ಗ್ರಾಹಕರನ್ನು ಸನ್ಮಾನಿಸಲು ಪ್ರಾರಂಭಿಸಿದ ವರ್ಷ – 2007–08
- ಕೇಂದ್ರ ಸರಕಾರದಿಂದ 2008 ರಲ್ಲಿ ಕೃಷಿ ಸಾಲದ ಮೇಲೆ ಮನ್ನಾ ಯೋಜನೆಯಡಿ 555 ಸದಸ್ಯ ಸಾಲಗಾರರಿಗೆ ರೂ.193.64 ಲಕ್ಷ ಸಾಲ ಮನ್ನಾ ಸೌಲಭ್ಯ ಒದಗಿಸಿದ್ದು
- ರಾಜ್ಯ ಸರಕಾರದ ನೇಕಾರರ ಸಾಲ ಮನ್ನಾ ಯೋಜನೆಯಡಿಯಲ್ಲಿ 745 ಸದಸ್ಯ ಸಾಲಗಾರರಿಗೆ ರೂ.20.92 ಲಕ್ಷ ಸಾಲ ಮನ್ನಾ ಸೌಲಭ್ಯ ಒದಗಿಸಿದ್ದು.
- ಪ್ರಕೃತಿ ವಿಕೋಪದಿಂದ ಪ್ರವಾಹ ಬಂದಾಗ ಗಂಜೀ ಕೇಂದ್ರ ತೆಗೆದಿದ್ದು – ಅಕ್ಟೋಬರ 2009
- ಬಾಗಲಕೋಟೆಯಲ್ಲಿ ರಿಝರ್ವ ಬ್ಯಾಂಕಿನಿಂದ ಫೇಕ್ ನೋಟ್ ಗಳ ಪತ್ತೆ ಕುರಿತು ಕಾರ್ಯಾಗಾರ – ದಿ. 22–06–2010
- ಗ್ರಾಹಕರ ಅನುಕೂಗವಾಗಲು ಇ–ಸ್ಟಾಂಪಿಂಗ್ ಸೌಲಭ್ಯ ಪ್ರಾರಂಭಿಸಿದ್ದು – ದಿ. 01/01/2011
- ವಿಶೇಷ ಯೋಜನೆಯಡಿ 200 ಜನ ನೇಕಾರರಿಗೆ ವಿದ್ಯುತ್ ಮಗ್ಗಗಳ ಅಳವಡಿಕೆಗಾಗಿ ಸಬ್ಸಿಡಿ ಚೆಕ್ ನೀಡಿದ್ದು– ದಿ. 30/07/2012
- ಸಿಬ್ಬಂದಿ ವ್ಯಕ್ತಿತ್ವ ವಿಕಸನ ಶಿಬಿರ – 12/02/2012
- ಬಾದಾಮಿ ಶಾಖೆಯಿಂದ ಹೊಸೂರ ಗ್ರಾಮದಲ್ಲಿ ಹೈನುಗಾರಿಕೆಗಾಗಿ ವಿಶೇಷ ಸಾಲ ಸೌಲಭ್ಯ – 08/08/2012
-